## ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.

## ಎಸ್.ಸಿ. 21/2025

1. ಯಾದಗಿರಿ ಗ್ರಾಮೀಣ ಪೊಲೀಸಠಾಣೆ .....ಫಿರ್ಯಾದಿ

ವಿರುದ್ಧ

1. ರಾಮು ಮತ್ತು ಇತರರು .....ಆರೋಪಿತರು

**ದೋಷಾರೋಪಣೆ**

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ರಾಮು ತಂದೆ ಈಶ್ವರ ರಾಠೋಡ, ವಯಸ್ಸುಃ 49 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಕಂಚಗಾರಳ್ಳಿ ತಾಂಡಾ ತಾಃ ಜಿಃ ಯಾದಗಿರಿ
2. ವಿಜ್ಜು @ ವಿಜಯಕುಮಾರ ತಂದೆ ಈಶ್ವರ ರಾಠೋಡ, ವಯಸ್ಸುಃ 38 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಕಂಚಗಾರಳ್ಳಿ ತಾಂಡಾ ತಾಃ ಜಿಃ ಯಾದಗಿರಿ
3. ದಿನೇಶ ತಂದೆ ರಾಮು ರಾಠೋಡ, ವಯಸ್ಸುಃ 28 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಕಂಚಗಾರಳ್ಳಿ ತಾಂಡಾ ತಾಃ ಜಿಃ ಯಾದಗಿರಿ
4. ಮೋತಿಲಾಲ ತಂದೆ ಮಾನಸಿಂಗ ರಾಠೂಡ, ವಯಸ್ಸುಃ 22 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಕಂಚಗಾರಳ್ಳಿ ತಾಂಡಾ ತಾಃ ಜಿಃ ಯಾದಗಿರಿ

5 ಚೌಳಿಬಾಯಿ @ ಚಾಮಳಿ ಬಾಯಿ ಗಂಡ ರಾಮು ರಾಠೋಡ, ವಯಸ್ಸುಃ 28 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಕಂಚಗಾರಳ್ಳಿ ತಾಂಡಾ ತಾಃ ಜಿಃ ಯಾದಗಿರಿ

6 ಸೀತಾ @ ಸೀತಿಬಾಯಿ ಗಂಡ ಈಶ್ವರ, ವಯಸ್ಸುಃ 59 ವರ್ಷ, ಉದ್ಯೋಗಃ ಹೊಲಮನೆಕೆಲಸ ಸಾಃ ಕಂಚಗಾರಳ್ಳಿ ತಾಂಡಾ ತಾಃ ಜಿಃ ಯಾದಗಿರಿ

7 ಸುನ್ನಿಬಾಯಿ @ ಸೋನಿಬಾಯಿ ಗಂಡ ವಿಜ್ಜು ರಾಠೋಡ, ವಯಸ್ಸುಃ 32 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಕಂಚಗಾರಳ್ಳಿ ತಾಂಡಾ ತಾಃ ಜಿಃ ಯಾದಗಿರಿ

8 ಕಮಲಿಬಾಯಿ ಗಂಡ ಮಾನಸಿಂಗ ರಾಠೋಡ, ವಯಸ್ಸುಃ 59 ವರ್ಷ, ಉದ್ಯೋಗಃ ಹೊಲಮನೆಕೆಲಸ ಸಾಃ ಕಂಚಗಾರಳ್ಳಿ ತಾಂಡಾ ತಾಃ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಚಾಸಾ-6 ರವರು ಆರೋಪಿತರ ಜಮೀನು ಸರ್ವೇ ನಂಬರ 45/3 ರ 1 ಎಕರೆ ಖರೀದಿ ಮಾಡಿದ್ದು ಹೊಲವನ್ನು ರೆಜಿಸ್ಟೇರ ಮಾಡಿಕೋಡಿ ಅಂತಾ ಕೇಳಿದಾಗ ಆರೋಪಿತರು ಚಾಸಾ-1 ರವರಿಗೆ ಜಗಳ ತೆಗೆದು ಜಮೀನು ಮಾರಾಟ ಮಾಡಿಲ್ಲ, ನೀವು ಹಣ ಕೊಟ್ಟಿಲ್ಲ, ನಾನು ಹೊಲ ನಿಮಗೆ ರಿಜಿಸ್ಟ್ರರ ಮಾಡಿಕೊಡಲ್ಲ ಅಂತಾ ಜಗಳ ತೆಗೆದು ಅದೇ ದ್ವೇಷ ಕಟ್ಟಿಕೊಂಡಿದ್ದು ದಿಃ 19.10.2022 ರಂದು ಬೆಳಿಗ್ಗೆ 08.30 ರ ಸುಮಾರು ಯಾದಗಿರಿ ಗ್ರಾಮೀಣ ಪೊಲೀಸ ಠಾಣಾ ಸರಹದ್ದಿನ ಪೈಕಿ ಕಂಚಗಾರಳ್ಳಿ ತಾಂಡಾದ ಆರೋಪಿತರ ಮನೆ ಮುಂದೆ ಚಾಸಾ-1 ಮತ್ತು 6 ರವರು ಕೂಡಿಕೊಂಡು ಕಟ್ಟಿಗೆ ತರಲು ಹೋಗುತ್ತಿರುವಾಗ, ಆರೊಪಿತರಾದ ನೀವುಗಳೆಲ್ಲರು ಅಕ್ರಮಕೂಟ ರಚಿಸಿಕೊಂಡು ಸೇರಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 143 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ದೊಂಬಿ ಮಾಡುವ ಉದ್ದೇಶದಿಂದ ಕೈಯಲ್ಲಿ ಕಬ್ಬಿಣದ ರಾಡು, ಬಡಿಗೆ, ಬಾರಕೊಲು ಹಿಡಿದುಕೊಂಡು ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 147 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ದೊಂಬಿ ಮಾಡುವ ಉದ್ದೇಶದಿಂದ ನಿಮ್ಮ ಕೈಯಲ್ಲಿ, ಬಡಿಗೆ, ಕಬ್ಬಿಣದ ರಾಡು, ಬಾರಕೋಲು ಹಿಡಿದುಕೊಂಡು ಸದರಿ ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 148 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಹಲ್ಲೆ ಮಾಡುವ ಉದ್ದೇಶದಿಂದ ಚಾಸಾ-1 ಮತ್ತು 6 ರವರು ಟ್ರಾಕ್ಟರ ತೆಗೆದುಕೊಂಡು ಹೋಗುವಾಗ ನೀವುಗಳು ಅಡ್ಡಗಟ್ಟಿ ನಿಲ್ಲಿಸಿ ಮುಂದೆ ಹೋಗದಂತೆ ತಡೆದು ನಿಲ್ಲಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 341 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಹಲ್ಲೆ ಮಾಡುವ ಉದ್ದೇಶದಿಂದ ಚಾಸಾ-1 ರವರಿಗೆ ನಿಂದೇನು ಸೊಕ್ಕು ಸೂಳೇ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿ ಚಾಸಾ-1 ರವರಿಗೆ ಇವತ್ತು ಯಂಗಾದರೂ ಇಬ್ಬರೇ ಸಿಕ್ಕಿರಿ ಸೂಳೇ ಮಕ್ಕಳೇ ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 506 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

7. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ 6 ಮತ್ತು 8 ರವರು ಚಾಸಾ-7 ರವರ ಕೂದಲು ಹಿಡಿದು ಎಳೆದಾಡಿ ಹೊಡೆದಿದ್ದು, ಆ ಮೂಲಕ ನೀವು ಭಾರತೀಯ

ದಂಡ ಸಂಹಿತೆ ಕಲಂ. 323 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

8. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿ ಚಾಸಾ-1 ರವರಿಗೆ ಕೈಯಿಂದ ಹೊಡೆದು, ಕಾಲಿನಿಂದ ಒದ್ದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 324 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

9. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿ ಚಾಸಾ-6 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಬಾರಕೋಲು ಗುಣಿಯಿಂದ ತಲೆಯ ಮೇಲೆ ಹೊಡೆದು ತೀವ್ರ ಗಾಯ ಮಾಡಿ ಮತ್ತೇ ಕಬ್ಬಿಣದ ರಾಡಿನಿಂದ ಮೂಗಿಗೆ ಹೊಡೆದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 307 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ30.09.2025 ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.